**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ಃ 191/2021**

**ಫಿರ್ಯಾದುದಾರರುಃ** ರಾಜ್ಯದ ಪರ ಅಬಕಾರಿ ಉಪನಿರೀಕ್ಷಕರು,
ಹಾಸನ ಉಪವಿಭಾಗ, ಹಾಸನ

ವಿರುದ್ಧ

**ಆರೋಪಿಗಳುಃ** ನಿರ್ವಾಣೇಗೌಡ

**ಃದೋಷಾರೋಪಣೆಃ**

**ಹಾಸನದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧಿಶನಾದ ಟಿ.ಎಸ್. ಇನವಳ್ಳಿ, ನಾನು,**

ಆರೋಪಿಯಾದ,

ನಿರ್ವಾಣೇಗೌಡ,
ತಂದೆ ಈರೇಗೌಡ,
ವಯಸ್ಸು 65 ವರ್ಷ,
ಕೆ.ಕಾಟೀಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಆಲೂರು ತಾಲ್ಲೂಕು,
ಹಾಸನ ಜಿಲ್ಲೆ.

ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕ 06.10.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಹಾಸನ ತಾಲ್ಲೂಕು ಕಸಬಾ ಹೋಬಳಿ ನಂಜದೇವರಕಾವಲು ಗ್ರಾಮದಲ್ಲಿರುವ ನಿಮಗೆ ಆರೋಪಿಗೆ ಸೇರಿದ ಸರ್ವೆ ನಂಬರ್ 107 ರಲ್ಲಿರುವ 3.01 ಎಕರೆ ಜಮೀನಿನಲ್ಲಿ ಜೋಳದ ಬೆಳೆಯೊಂದಿಗೆ ಮಧ್ಯಭಾಗದಲ್ಲಿ ನೀವು ವೈಯಕ್ತಿಕ ಉದ್ದೇಶಕ್ಕಾಗಿ ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೆ ಸುಮಾರು 2 ರಿಂದ 4 ಅಡಿ ಎತ್ತರದಿಂದ ಕೂಡಿದ್ದು 31 ಗಾಂಜಾ ಗಿಡಗಳನ್ನು ಬೆಳೆಸಿರುವುದು ಕಂಡುಬಂದಿರುತ್ತದೆ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಮಾದಕ ದ್ರವ್ಯ ಮತ್ತು ಸೈಕೋಟ್ರೋಪಿಕ್ ವಸ್ತುಗಳ ಕಾಯಿದೆ 1982 ರ ಕಲಂ 8(ಬಿ) ಯನ್ನು ಉಲ್ಲಂಘಿಸಿದ್ದು, ಸದರಿ ಕಾಯಿದೆಯ ಕಲಂ 20(ಎ) ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಎರಡನೆಯದಾಗಿ, ಈ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ನೀವು ಆರೋಪಿ ನಿಮಗೆ ಸೇರಿದ ಜಮೀನಿನಲ್ಲಿ, ತಿಳುವಳಿಕೆ ಇದ್ದೇ ನಿಮ್ಮ ವೈಯಕ್ತಿಕ ಉದ್ದೇಶಕ್ಕಾಗಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆಸಿರುತ್ತೀರಿ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಮಾದಕ ದ್ರವ್ಯ ಮತ್ತು ಸೈಕೋಟ್ರೋಪಿಕ್ ವಸ್ತುಗಳ ಕಾಯಿದೆ **1982** ರ ಕಲಂ **25** ಮತ್ತು **27** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆಗೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕು ಎಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 23 ನೇ ಆಗಸ್ಟ್ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ಃ 191/2021**

**ಫಿರ್ಯಾದುದಾರರುಃ** ರಾಜ್ಯದ ಪರ ಅಬಕಾರಿ ಉಪನಿರೀಕ್ಷಕರು,
ಹಾಸನ ಉಪವಿಭಾಗ, ಹಾಸನ

ವಿರುದ್ಧ

**ಆರೋಪಿಗಳುಃ** **ನಿರ್ವಾಣೇಗೌಡ**

| | | |
|---|---|---|
| ಆರೋಪಿಯ ಹೆಸರು | ಃ | ನಿರ್ವಾಣೇಗೌಡ |
| ತಂದೆಯ ಹೆಸರು | ಃ | ಈರೇಗೌಡ |
| ವಯಸ್ಸು | ಃ | 65 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಕೆ.ಕಾಟೀಹಳ್ಳಿ ಗ್ರಾಮ,<br>ಕಸಬಾ ಹೋಬಳಿ,<br>ಆಲೂರು ತಾಲ್ಲೂಕು,<br>ಹಾಸನ ಜಿಲ್ಲೆ. |

**ಃಆಪಾದನೆಃ**

ಪ್ರಶ್ನೆ 1ಃ ಈಗ ನಿನಗೆ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವೆಯಾ?

ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಗೆ ಒಳಪಡುತ್ತೀಯಾ?

ಉತ್ತರಃ

**ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿದ್ದು, ಆರೋಪಿಯು ಕೊಟ್ಟ ಉತ್ತರವನ್ನು ಆತನು ಹೇಳಿದಂತೆಯೇ ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.**

**ದಿನಾಂಕ 23 ನೇ ಆಗಸ್ಟ್ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**